


ಈ ಪ್ರಕರಣ ನಡೆದುದು ನಾನು ಕರಮಚಂದನ ಕಚೇರಿಯಲ್ಲಿ ಸಹಾಯಕನಾಗಿ ಸೇರಿದ ಎರಡನೇ ವರ್ಷದಲ್ಲಿ. ಶಿಶಿರ ಕಳೆದು ವಸಂತ ಕಾಲಿರಿಸಿದ ದಿನಗಳವು. ಪ್ರಕೃತಿ ಹೊಸ ಕಳೆ ಪಡೆದುಕೊಂಡಿತ್ತು. ಇತ್ತೀಚೆಗಷ್ಟೇ ನಾವು ನೆಲ ಅಂತಸ್ತಿನಲ್ಲಿದ್ದ ಮನೆಯನ್ನು ಮೊದಲ ಅಂತಸ್ತಿಗೆ ಸ್ಥಳಾಂತರಿಸಿದ್ದೆವು. ಹಾಗಾಗಿ, ನಮ್ಮ ಮನೆಯೂ ಕಚೇರಿಯೂ ಒಂದೇ ಆಗಿಬಿಟ್ಟಿತ್ತು. ನಮ್ಮ ಕಟ್ಟಡದ ಮಾಲೀಕನೇ ನೆಲ ಅಂತಸ್ತಿನಲ್ಲಿ ವಾಸಿಸಲು ಆರಂಭಿಸಿದ್ದ ಕಾರಣ ನಮಗಿದು ಅನಿವಾರ್ಯವಾಗಿತ್ತು. ಕೊಂಚ ಇಕ್ಕಟ್ಟು ಅನಿಸಿದರೂ ಇದರಿಂದಾಗಿ ನಮ್ಮ ತಿಂಗಳ ಬಾಡಿಗೆಯ ಖರ್ಚು ಕಮ್ಮಿಯಾಗಿದ್ದು ನಮಗಾದ ಲಾಭ. ಒಂದು ದಿನ ಸಂಜೆ ನಾನು ಕಿಚನ್‌ನಲ್ಲಿ ರಾತ್ರಿಯ ಅಡುಗೆಯ ತಯಾರಿಯಲ್ಲಿದ್ದೆ. ಕರಮಚಂದ ಎಂದಿನಂತೆ ತನ್ನ ಗಣಕಯಂತ್ರದಲ್ಲಿ ಚೆಸ್ ಆಟದಲ್ಲಿ ಮುಳುಗಿದ್ದ. ಆಗ ಮರದ ಹಳೆಯ ಪಾವಟಿಗೆಗಳು ಕಿರುಗುಟ್ಟುವ ಸದ್ದು ತೂರಿ ಬಂತು. ಮತ್ತೆರಡು ಕ್ಷಣಗಳಲ್ಲಿ ಕರೆಗಂಟೆ ನಾದ ಹೊಮ್ಮಿಸಿತು. ಅಗಳಿ ಸರಿಸಿ, ಕರಮಚಂದ ಅತಿಥಿಯನ್ನು ಸ್ವಾಗತಿಸಿದ್ದು ಗೊತ್ತಾಯಿತು.

ನಾನು ಇಣುಕಿ ನೋಡಿದೆ. ಸುಮಾರು ಅರವತ್ತರ ಆಸುಪಾಸಿನಲ್ಲಿದ್ದ ಸ್ಥೂಲಕಾಯಿ. ಅರೆನೆರೆತ ಕೂದಲು, ದಪ್ಪ ಮೂಗು, ತುಂಬು ತೋಳಿನ ಷರಟು, ದೊಗಳೆ ಪ್ಯಾಂಟು ಧರಿಸಿದ ಆಸಾಮಿ ತುಸು ಜೋರಾಗಿ ಉಸಿರು ಹೊರಹಾಕುತ್ತಾ, ಕೋಣೆಯ ತುಂಬಾ ದಿಟ್ಟಿ ಹರಿಸಿದ. ಕರಮಚಂದ ಆತನಿಗೆ ಕೂರಲು ಸೂಚಿಸಿದ.

"ನಾನು ತಂಗರಾಜು ಅಂತ. ಇಲ್ಲೇ ಐಮಂಗಲದಲ್ಲಿ ಇರೋದು. ನೀವು ಕರಮಚಂದ ಅಲ್ವೇ?"

ಆತನದು ಶುಷ್ಕ ದನಿ.

"ನೀವು ಸರಿಯಾದ ಸ್ಥಳಕ್ಕೇ ಬಂದಿದ್ದೀರಿ. ಹೇಳಿ, ನೀವು ನನ್ನಿಂದ ಪೈಂಟಿಂಗ್ ಕಲಿಯಲು ಬಂದಿಲ್ಲ, ಅಲ್ವೆ, ಚಿತ್ರಕಾರರೆ?"

ಆತ ಆಘಾತಕ್ಕೊಳಗಾದವನಂತೆ ಕಂಡ.

"ನಿಮ್ಗೆ ಹಳೆಯ ಕಲಾಕೃತಿಗಳಲ್ಲಿ ವಿಶೇಷ ಆಸಕ್ತಿಯಿರೋದು ನಿಜಕ್ಕೂ ಶ್ಲಾಘನೀಯ."

ಆತ ಅಪ್ರತಿಭನಾದ.

"ನೀವು ಹೇಳಿದ್ದೆಲ್ಲಾ ನಿಜ. ನನ್ನ ವಿಚಿತ್ರ ಸಮಸ್ಯೆಗೆ ಪರಿಹಾರ ಹೇಳಬಲ್ಲ ಸಾಮರ್ಥ್ಯವುಳ್ಳವರ ಬಳಿ ಬಂದಿದ್ದೇನೆ ಎಂಬುದರಲ್ಲಿ ಸಂಶಯವಿಲ್ಲ. ಈಗ ಹೇಳಿ, ನಿಮ್ಗೆ ನನ್ನ ವಿಚಾರ ಹೇಗ್ ಗೊತ್ತಾಯ್ತು?"

ಕರಮಚಂದ ದೊಡ್ಡದಾಗಿ ನಗು ಬೀರಿದ.

"ಓಹ್, ಅದೇನೂ ವಿಶೇಷ ಸಾಮರ್ಥ್ಯ ಅಲ್ಲ, ತಂಗರಾಜು. ಕಣ್ಣು ತೆರೆದಿಟ್ಟರೆ, ನಿಮ್ಗೂ ಕಾಣುವಂತಹದು. ಚಿತ್ರಕಾರರಿಗೆ ಹೆಚ್ಚಾಗಿ ಒಂದು ಅಭ್ಯಾಸ ಇರುತ್ತೆ. ಬಲಗೈಯಲ್ಲಿ ಚಿತ್ರ ಬಿಡಿಸುತ್ತಾ, ತಪ್ಪಾದ್ರೆ, ತಕ್ಷಣ ಎಡಅಂಗೈನಿಂದ ಉಜ್ಜೋದು. ಇಲ್ಲದಿದ್ದರೂ, ಚಿತ್ರಕಾರರ ಅಂಗೈಯಲ್ಲಿ ಬಣ್ಣಗಳು ಮೆತ್ತಿಕೊಳ್ಳೋದು ಸಾಮಾನ್ಯ. ನೀವು ಅದನ್ನ ಸರಿಯಾಗಿ ತೊಳೆದಿಲ್ಲ. ಅಥವಾ ಕೆಲವು ಬಣ್ಣಗಳು ಪಕ್ಕನೆ ಹೋಗೋದಿಲ್ಲ. ನಿಮ್ ಕೈಲಿ ಬಣ್ಣ ನೋಡಿ, ನೀವೊಬ್ಬ